ಅಧ್ಯಕ್ಷರು:- ಆಯಿತು, ತಡೆಹಿಡಿದಿದ್ದೇನೆ. ಶ್ರೀ ನಾರಾಯಣ ಸ್ವಾಮಿ, ಶ್ರೀ ರೇವಣ್ಣ, ಶ್ರೀ ಲಕ್ಕಪ್ಪ ಅವರುಗಳು ಸಭೆಯಲ್ಲಿ ಇಲ್ಲ. ಈಗ ಶ್ರೀ ಸೋಮಸುಂದರರ ಅವರು 1360ನೇ ಪ್ರಶ್ನೆ ಕೇಳಬಹುದು.

ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕೈಗಾರಿಕೆಗಳಲ್ಲಿನ ನೇಮಕಾತಿ ಬಗ್ಗೆ.

1360 ಶ್ರೀ ಕೆ.ಎನ್. ಸೋಮಸುಂದರರ (ಕೃಷ್ಣರಾಜ):- ಮಾನ್ಯ ರೇಷ್ಮೆ ರಾಜ್ಯ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕೈಗಾರಿಕಾ ಘಟಕಗಳಲ್ಲಿ ಸರ್ಕಾರಿ ನಿಯಮದ ಪ್ರಕಾರ ಬಡ್ತಿ ನೀಡುವಲ್ಲಿ ರೋಸ್ಟರ್ ಪದ್ಧತಿ ಅನುಸರಿಸಲಾಗುತ್ತಿದೆಯೇ, ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು.

ಆ) ಈ ಘಟಕಗಳ ವೃಂದ ನೇಮಕಾತಿ ನಿಯಮಗಳು ಹಾಗೂ ಜೇಷ್ಠತಾ ಪಟ್ಟಿ ಯಾವಾಗಿನಿಂದ ಜಾರಿಯಲ್ಲಿದೆ. ಜಾರಿಗೊಳಿಸಿದ್ದರೆ ಬಡ್ತಿಯನ್ನು ಯಾವ ನಿಯಮದ ಪ್ರಕಾರ ನೀಡಲಾಗುತ್ತಿದೆ.

ಇ) ಇದರಲ್ಲಿ ಜನರಲ್ ಮ್ಯಾನೇಜರ್, ಫ್ಯಾಕ್ಟರಿ : ಮ್ಯಾನೇಜರ್, ಅಸಿಸ್ಟೆಂಟ್ ಫ್ಯಾಕ್ಟರಿ ಮ್ಯಾನೇಜರ್ ಹುದ್ದೆಗಳಲ್ಲಿರುವ ಪರಿಶಿಷ್ಟ ಜಾತಿ ನೌಕರರೆಷ್ಟು ಹಾಗೂ ಇತರರೆಷ್ಟು?

ಶ್ರೀ ಎಂ.ಎಸ್. ಆತ್ಮಾನಂದ (ರೇಷ್ಮೆ ಸಚಿವರು.):-

ಅ) ವೃಂದ ಮತ್ತು ನೇಮಕಾತಿ ನಿಯಮಗಳು ರೇಷ್ಮೆ ಕಾರ್ಖಾನೆಗಳಲ್ಲಿ ಜಾರಿಯಲ್ಲಿ ಇಲ್ಲದಿದ್ದರೂ ರೋಸ್ಟರ್ ಪದ್ಧತಿಯನ್ನು ಹಿಂದಿನಿಂದಲೂ ಅನುಸರಿಸಲಾಗಿದೆ.

ಆ) ಜಾರಿಯಲ್ಲಿಲ್ಲ.

ರೇಷ್ಮೆ ಕಾರ್ಖಾನೆಗಳಿಗೆ ಸಂಬಂಧಪಟ್ಟಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಯಾರಿಸಲಾಗುತ್ತಿದೆ. ಜೇಷ್ಠತಾ ಪಟ್ಟಿಯನ್ನು ಸಹ ತಯಾರಿಸಲಾಗುತ್ತಿದೆ. 1983ನೇ ಸಾಲಿನಿಂದ ಯಾವ ಬಡ್ತಿಯನ್ನು ನೀಡಿಲ್ಲ ಹಾಗೂ ಹಿಂದಿನ ಅಂತಹ ಬಡ್ತಿಯನ್ನು ಆಡಹಾಕ್ ಆಧಾರದ ಮೇಲೆ ನೀಡಲಾಗಿದೆ.

ಇ) ಈ ಹುದ್ದೆಗಳಲ್ಲಿ ಇರುವ ಒಟ್ಟು 13 ನೌಕರರ ಪೈಕಿ 5 ನೌಕರರು ಪರಿಶಿಷ್ಟ ಜನಾಂಗಕ್ಕೆ ಸೇರಿದವರಾಗಿರುತ್ತಾರೆ.

ಶ್ರೀ ಕೆ.ಎಸ್. ಸೋಮಸುಂದರರ:- ಮಾನ್ಯ ಅಧ್ಯಕ್ಷರೇ, ಸೀನಿಯಾರಿಟಿ ಲಿಸ್ಟ್ ಮತ್ತು ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಯಾವಾಗ ಮಾಡುತ್ತೀರಿ?

ಶ್ರೀ ಎಂ.ಎಸ್. ಆತ್ಮಾನಂದ:- ಮಾನ್ಯ ಅಧ್ಯಕ್ಷರೇ, ನಾನು ಕಳೆದ ವಾರ ಇವರ ಪ್ರಶ್ನೆಗೆ ಉತ್ತರ ಕೊಟ್ಟಿರುವಂತೆ ದಿನಾಂಕ 11-7-90 ರಂದು ಈ ಒಂದು ಕೇಡರ್ ಆಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಸರ್ಕಾರದ ಒಪ್ಪಿಗೆಗೆ ಕಳುಹಿಸಿಕೊಡಲಾಗಿದೆ. ಸರ್ಕಾರದ ಮಂಜೂರಾತಿ ದೊರೆತ ಕೂಡಲೇ ಈ ಒಂದು ಕೇಡರ್ ಆಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ನ ಅನುಗುಣವಾಗಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಸೋಮಸುಂದರರ:- ನಿರ್ದೇಶಕರ ಹುದ್ದೆಯನ್ನು ಪರಿಶಿಷ್ಟ ಜಾತಿಯವರಿಗೆ ಕೊಡತಕ್ಕಂಥ ಆಲೋಚನೆ ಏನಾದರೂ ಇದೆಯೇ?

ಶ್ರೀ ಎಂ.ಎಸ್. ಆತ್ಮಾನಂದ:- ಅವರಿಗೆ ಅರ್ಹತೆ ಇದ್ದರೆ ಹಾಗೂ ನಮ್ಮ ಕಾನೂನಿನಲ್ಲಿ ಅವಕಾಶ ಇದ್ದರೆ ಕೊಡುತ್ತೇವೆ.

ಅಧ್ಯಕ್ಷರು:- ಶ್ರೀ ಸಾದತ್ ಅಲಿಖಾನ್, ಶ್ರೀ ಮಲ್ಲಿಕಾರ್ಜುನ್, ಶ್ರೀ ವೆಂಕಟೇಶ್, ಶ್ರೀ ರಾಮಲಿಂಗರೆಡ್ಡಿ, ಶ್ರೀ ರೇವಣ್ಣ ಆವರುಗಳು ಸಭೆಯಲ್ಲಿ ಇಲ್ಲ.

ಈಗ 7ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತೇನೆ.

ಪ್ರಶ್ನೆ 123 (603)

ಶ್ರೀ ಮನೋಹರ ಐನಾಪುರ್:- ಮಾನ್ಯ ಅಧ್ಯಕ್ಷರೇ....

ಶ್ರೀ ಎಂ. ರಾಜಶೇಖರಮೂರ್ತಿ:- ಇದಕ್ಕೆ ಸ್ವಲ್ಪ ಸಮಯಾವಕಾಶ ಬೇಕು.

ಅಧ್ಯಕ್ಷರು:- ಮಾನ್ಯ ಸಚಿವರು ಈ ಪ್ರಶ್ನೆಗೆ ಸ್ವಲ್ಪ ಕಾಲಾವಕಾಶ ಕೇಳಿದ್ದಾರೆ. ಆದಕ್ಕಾಗಿ ಮುಂದಕ್ಕೆ ಹಾಕಿದ್ದೇನೆ.

ಶ್ರೀ ಮನೋಹರ ಐನಾಪುರ್:- ಇದನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳಬಹುದೇ ಅಧ್ಯಕ್ಷರೇ.

ಅಧ್ಯಕ್ಷರು:- ತೆಗೆದುಕೊಳ್ಳಬಹುದು.

ಕೈಗಾರಿಕೆಗಳ ನೇಮಕಾತಿಯಲ್ಲಿ ಹರಿಜನ ಗಿರಿಜನರಿಗೆ ಮೀಸಲಾತಿ ಸೌಲಭ್ಯ.

724 ಶ್ರೀ ಕರಿಯಣ್ಣ (ಹೊಳೇ ಹೊನ್ನೂರು):- ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ಫ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದ ಸ್ವಾಧೀನದಲ್ಲಿರುವ ಸಾರ್ವಜನಿಕ ಕೈಗಾರಿಕೆಗಳ ನೇಮಕಾತಿಯಲ್ಲಿ ಹರಿಜನ ಗಿರಿಜನರಿಗೆ ಮಿಸಲಾತಿ ಸೌಲಭ್ಯ ಇದೆಯೇ?

ಆ) ಹಾಗಿದ್ದಲ್ಲಿ ಇದನ್ನು ಎಲ್ಲಾ ಕೈಗಾರಿಕೆಗಳಲ್ಲಿ ಜಾರಿಗೆ ತರಲಾಗಿದೆಯೇ?

ಶ್ರೀ ಎಸ್.ಎಂ. ಯೂಹ್ಯಾ (ಕೈಗಾರಿಕಾ , ಇಂಧನ ಮತ್ತು ವಕ್ಫ್ ಸಚಿವರು)

ಅ) ಹೌದು.

ಆ) ಹೌದು.

ಶ್ರೀ ಕರಿಯಣ್ಣ:- ಮಾನ್ಯ ಅಧ್ಯಕ್ಷರೇ, ಕೈಗಾರಿಕೆಗಳಲ್ಲಿ ಹರಿಜನ ಗಿರಿಜನರಿಗೆ ನೌಕರಿ ಮಿಸಲಾತಿ ಇದೆಯೆಂದು ಮಾನ್ಯ ಸಚಿವರು ಹೇಳಿದ್ದಾರೆ. ಹಾಗಾದರೆ ಎಲ್ಲಾ ಸಾರ್ವಜನಿಕ ಕೈಗಾರಿಕೆಗಳಲ್ಲಿ 18 ಪರ್‌ಸೆಂಟ್‌ನಷ್ಟು ಉದ್ಯೋಗವನ್ನು ಹರಿಜನ ಗಿರಿಜನರಿಗೆ ಕೊಡಲಾಗಿದೆಯೇ? 18 ಪರ್‌ಸೆಂಟ್ ಹುದ್ದೆಗಳನ್ನು ತುಂಬುವುದಕ್ಕೆ ಇದುವರೆಗೆ ಆಗದೇ ಇದ್ದರೆ, ಅದನ್ನು ಮುಂದೆ ತುಂಬುವುದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಾ? ಅದರ ಬಗ್ಗೆ ತಿಳಿಸಬೇಕು ಮತ್ತು ಕೇಡರ್‌ವಾರು ಯಾವ ಯಾವ ಕೇಡರ್‌ನಲ್ಲಿ ಎಷ್ಟೆಷ್ಟು ಹುದ್ದೆಗಳನ್ನು ಮಿಸಲಾತಿ ಇಡುವುದಕ್ಕೆ ಕ್ರಮ ಏನಾದರೂ ಇದೆಯೇ ಇದ್ದರೆ ಆ ಹುದ್ದೆಗಳನ್ನು ತುಂಬುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಎಸ್.ಎಂ. ಯೂಹ್ಯಾ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿರುವ ಪ್ರಶ್ನೆ ಬಹಳ ಪ್ರಮುಖವಾದುದು. ನಮ್ಮಲ್ಲಿ ಪಬ್ಲಿಕ್ ಸೆಕ್ಟಾರ್ ಅಂಡರ್ ಟೇಕಿಂಗ್ಸ್ 61 ಇವೆ. ಸರ್ಕಾರದ ನೀತಿ ಪ್ರಕಾರ ಶೆಡ್ಯುಲ್ಡ್ ಕ್ಯಾಸ್ಟ್ ಮತ್ತು ಶೆಡ್ಯುಲ್ಡ್ ಟ್ರೈಬ್‌ನವರಿಗೆ ಎಷ್ಟು ಹುದ್ದೆಗಳು ದೊರಕಬೇಕೋ ಅಷ್ಟು ರಿಕ್ರೂಟ್‌ಮೆಂಟ್ ಮಾಡಬೇಕೆಂದು ಇದೆ. ಎಲ್ಲಾ 61 ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲೂ ನಾವು ರಿವ್ಯೂ ಮಾಡುತ್ತಿದ್ದೇವೆ. ಒಂದು ಪಕ್ಷ ಶೆಡ್ಯುಲ್ಡ್ ಕ್ಯಾಸ್ಟ್ ಮತ್ತು ಶೆಡ್ಯುಲ್ಡ್ ಟ್ರೈಬ್‌ನವರಿಗೆ ನಿಯಮಾನುಸಾರ ಹುದ್ದೆಗಳು ಇದುವರೆಗೆ ಸಿಕ್ಕದೇ ಇದ್ದಲ್ಲಿ ಹರಿಜನ ಮತ್ತು ಗಿರಿಜನರಿಗೆ ನ್ಯಾಯ